# ಮೌನಿಯ ಮಾತು

ಮೌನಿ ರಾಯ್ ಇತ್ತೀಚೆಗೆ ಮಾತು ಹೆಚ್ಚು ಮಾಡಿದ್ದಾರೆ. ಅದರಲ್ಲೂ ಕರಣ್ ಜೋಹರ್ ನಿರ್ಮಾಣದ 'ಬ್ರಹ್ಮಾಸ್ತ್ರ' ಚಿತ್ರದಲ್ಲಿ ಪ್ರಮುಖ ಪಾತ್ರ ಸಿಕ್ಕಿದ ಬಳಿಕ ಆಕೆಯ ಸಂದರ್ಶನಕ್ಕೆ ಬೇಡಿಕೆ ಹೆಚ್ಚಾಗಿದೆ. ಇತ್ತೀಚೆಗೆ ಪತ್ರಕರ್ತರೊಬ್ಬರಿಗೆ ನೀಡಿದ ಸಂದರ್ಶನದಲ್ಲಿ ಆಕೆ ತನ್ನ ಪಾತ್ರದ ಬಗ್ಗೆ ವಿವರವಾಗಿ ಮಾತನಾಡಿದ್ದಾಳೆ. ಆದರೆ ಈ ಸಂದರ್ಶನದಿಂದ ಕರಣ್ ಜೋಹರ್ ಸಿಟ್ಟಾಗಿದ್ದಾನಂತೆ. ಚಿತ್ರದ ಶೂಟಿಂಗ್ ಇನ್ನೂ ನಡೆಯುತ್ತಿದೆ. ಮೌನಿಯ ಪಾತ್ರದ ಬಗ್ಗೆ ಸಸ್ಪೆನ್ಸ್ ಇರಲಿ ಎಂದುಕೊಂಡಿದ್ದ ಕರಣ್‌ಗೆ ಮೌನಿಯ ಈ ನಡೆ ನಿರಾಶೆ ಉಂಟು ಮಾಡಿದೆಯಂತೆ. ಮೌನಿಗೆ ಫೋನ್ ಮಾಡಿ ಕರಣ್ ಕ್ಲಾಸ್ ತೆಗೆದುಕೊಂಡದ್ದೂ ಆಗಿದೆ.

ಟೀವಿ ಧಾರಾವಾಹಿಗಳಲ್ಲಿ ಕಳೆದ ಹಲವು ವರ್ಷಗಳಿಂದ ಸುದ್ದಿ ಮಾಡುತ್ತಿದ್ದ ಮೌನಿ ಆ ಮೂಲಕವೇ ಬಾಲಿವುಡ್‌ಗೆ ಎಂಟ್ರಿ ಪಡೆದದ್ದು. 'ಕ್ಯೋಂ ಕಿ ಸಾಸ್ ಭಿ ಕಭೀ...' ಧಾರಾವಾಹಿಯ ಕೃಷ್ಣಾ ತುಳಸಿ ಪಾತ್ರ ಈಕೆಗೆ ಅತ್ಯಧಿಕ ಕೀರ್ತಿ ತಂದುಕೊಟ್ಟಿತ್ತು. ಬಳಿಕ 'ದೇವೋಂ ಕೆ ದೇವ್ ಮಹಾದೇವ್', ಮತ್ತು 'ನಾಗಿನ್' ಧಾರಾವಾಹಿಯ ಶಿವಾಂಗಿ ಪಾತ್ರ ಈಕೆಯ ಕೀರ್ತಿಯನ್ನು ಇನ್ನಷ್ಟು ಎತ್ತರಿಸಿತು. ಹಾಗೆ ಅಕ್ಷಯ್ ಕುಮಾರ್ ಅಭಿನಯದ 'ಗೋಲ್ಡ್' ಚಿತ್ರಕ್ಕೆ ಮೊದಲ ಅವಕಾಶ ಸಿಕ್ಕಿತು. ಅಲ್ಲಿಂದೀಚೆಗೆ ಹಲವು ನಿರ್ಮಾಪಕರು ಈಕೆಯತ್ತ ಗಮನ ಹರಿಸಿದ್ದಾರೆ. ಈಗ 'ರೋಮಿಯೊ ಅಕ್ಬರ್ ವಾಲ್ಟರ್', 'ಮೇಡ್ ಇನ್ ಚೈನಾ', 'ಬೋಲೆ ಚೂಡಿಯಾಂ' ಚಿತ್ರಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾಳೆ. ಕನ್ನಡದ 'ಕೆಜಿಎಫ್' ಚಿತ್ರದ ಹಿಂದಿ ಹಾಡು 'ಗಲೀ ಗಲೀ...'ಯಲ್ಲಿ ಮಾದಕ ನೃತ್ಯಕ್ಕೆ ಹೆಜ್ಜೆ ಹಾಕಿ, ಪ್ರೇಕ್ಷಕರ ಮನ ಗೆದ್ದಿರುವ ಮೌನಿ, ಸದ್ಯಕ್ಕಂತೂ ಬಾಲಿವುಡ್‌ನಲ್ಲಿ ಬೇಡಿಕೆಯ ನಟಿ. ಟೀವಿಯಲ್ಲೂ ರಿಯಾಲಿಟಿ ಶೋಗಳಲ್ಲಿ ಈಕೆ ಸದಾ ಕಾಣಿಸಿಕೊಳ್ಳುತ್ತಿದ್ದಾಳೆ.





# ರಣಬೀರ್ ಮದುವೆ ಸದ್ಯಕ್ಕಿಲ್ಲ?

ರಣಬೀರ್ ಕಪೂರ್ ಮತ್ತು ಅಲಿಯಾ ಭಟ್ ಮದುವೆ ಈ ವರ್ಷದೊಳಗೆ ಆಗುವಂತೆ ಕಾಣುತ್ತಿಲ್ಲ. ವರ್ಷದ ಆರಂಭದಲ್ಲಿ ಮದುವೆ ಈ ವರ್ಷವೇ ನಡೆಯುತ್ತದೆ ಎಂಬ ಸುದ್ದಿ ಹಬ್ಬಿತ್ತು. ಆದರೆ ಇವರಿಬ್ಬರೂ ಜೊತೆಯಾಗಿ ನಟಿಸಿರುವ 'ಬ್ರಹ್ಮಾಸ್ತ್ರ' ಸಿನಿಮಾ ಬಿಡುಗಡೆ ಡಿಸೆಂಬರ್ ಎರಡನೇ ವಾರದಲ್ಲಿ ನಡೆಯುವುದರಿಂದ ಅದಕ್ಕೂ ಮುನ್ನ ಮದುವೆ ನಡೆಯಲಿಕ್ಕಿಲ್ಲ ಎನ್ನುವುದು ಬಾಲಿವುಡ್ ಪಂಡಿತರ ಅಂದಾಜು. ಬಾಲಿವುಡ್‌ನ ಯಾವುದೇ ಸಮಾರಂಭಕ್ಕೆ ಈ ಜೋಡಿ ಕೈ ಕೈ ಹಿಡಿದುಕೊಂಡು ಹೋಗುವುದು ನಡೆದೇ ಇದೆ.

ಈ ಮಧ್ಯೆ ರಣಬೀರ್ ಮುಂದಿನ ಚಿತ್ರ 'ಶಂಶೇರಾ'ದ ಸಿದ್ಧತೆ ನಡೆದಿದೆ. ಯಶ್‌ರಾಜ್ ಫಿಲಂಸ್ ನಿರ್ಮಾಣದ ಈ ಚಿತ್ರ ಭಾರೀ ವೆಚ್ಚದ ಯುದ್ಧದ ಚಿತ್ರವೆನ್ನಲಾಗಿದ್ದು, ಸಂಜಯ್‌ದತ್ ಸಹ ನಟಿಸಲಿದ್ದಾರಂತೆ. ಆದರೆ ಅದಕ್ಕೂ ಮುನ್ನ ರಣಬೀರ್, ನಿರ್ದೇಶಕ ಸಂಜಯಲೀಲಾ ಬನ್ಸಾಲಿ ಚಿತ್ರದಲ್ಲಿ ನಟಿಸಲು ನಿರ್ಧರಿಸಿದ್ದಾರಂತೆ. ಬಾಲಿವುಡ್‌ನಲ್ಲಿ ಸದ್ಯಕ್ಕೆ ಬನ್ಸಾಲಿ ಮೇಲೆ ಅಲಿಖಿತ ನಿಷೇಧವಿದೆ. 'ಸಂಜು' ಚಿತ್ರದಲ್ಲಿ ಸಿಬ್ಬಂದಿಯೊಬ್ಬಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಕೇಳಿಬಂದು, ಸದ್ಯಕ್ಕೆ ಬನ್ಸಾಲಿ ತೆರೆಮರೆಗೆ ಸೇರಿದ್ದಾರೆ. ಆದರೆ 'ಬನ್ಸಾಲಿಯವರು ಒಬ್ಬ ಅತ್ಯುತ್ತಮ ವ್ಯಕ್ತಿ' ಎಂದು ರಣಬೀರ್ ಹೊಗಳಿದ್ದು, ಅವರ ಮುಂದಿನ ಚಿತ್ರದಲ್ಲಿ ನಟಿಸಲು ಒಪ್ಪಿರುವುದು ಎಲ್ಲೆಡೆ ಕುತೂಹಲ ಕೆರಳಿಸಿದೆ.

'ಸಂಜು' ಚಿತ್ರ ರಣಬೀರ್‌ಗೆ ವೃತ್ತಿಜೀವನದಲ್ಲೇ ಅತ್ಯಧಿಕ ಕೀರ್ತಿ ತಂದುಕೊಟ್ಟದ್ದು ಸುಳ್ಳಲ್ಲ. ಆ ಹಿನ್ನೆಲೆಯಲ್ಲಿ ಅದರ ನಿರ್ದೇಶಕ ಬನ್ಸಾಲಿಗೆ ಗೌರವ ಕೊಡುವುದೂ ತಪ್ಪಲ್ಲ. ಆದರೆ ಇಡೀ ಬಾಲಿವುಡ್ 'ಮಿಟೂ' ಚಳವಳಿಯ ಅಬ್ಬರದಲ್ಲಿ ಲೈಂಗಿಕ ಕಿರುಕುಳ ನೀಡಿದ ಆರೋಪ ಹೊತ್ತಿರುವ ಎಲ್ಲ ನಿರ್ದೇಶಕ, ನಟರಿಗೂ ಅಲಿಖಿತ ಬಹಿಷ್ಕಾರ ಹಾಕಿರುವಾಗ, ರಣಬೀರ್‌ನಂತಹ ಪ್ರಮುಖ ಹೀರೊ ಹೀಗೆ ಮಾಡಬಹುದೇ... ಎನ್ನುವುದೀಗ ಪ್ರಶ್ನೆ. ಆದರೆ ಈ ಪ್ರಶ್ನೆಯನ್ನು ಬಹಿರಂಗವಾಗಿ ಎತ್ತಲು ಈಗ ಯಾರೂ ಸಿದ್ಧರಿಲ್ಲವಂತೆ.

■ ಬಿಂದು


ಯುಗಾದಿ ವಿಶೇಷಾಂಕ 2019

ಇದೀಗ ಮಾರುಕಟ್ಟೆಯಲ್ಲಿ

ಬಾಲಿವುಡ್ ಬೆಡಗು

ಬಾಲಿವುಡ್ ನಾಯಕಿಯರ ಬಿಗ್ ರೇಸ್


